ಮಾಲೀಕರಾಗಿರಬಹುದು. ಆದರೆ, ಇನ್ನೂರು ರೂಪಾಯಿ ಕಡಿಮೆ ದಂಡ ವಿಧಿಸುವಷ್ಟು ನನ್ನ ಮೀತಾ ಅಗ್ಗ ಅಂದುಕೊಂಡಿರೇನು?' ಅಂದ. ಮಾಲೀಕ ಎರಡು ಸಾವಿರ ಇಟ್ಟುಕೊಂಡು ಅವನಿಗೊಂದು ದೊಡ್ಡ ನಮಸ್ಕಾರ ಹಾಕಿ ಹೊರಟು ಹೋದ.

ಅದೆಷ್ಟು ಭಕ್ತಿ, ಅದೆಷ್ಟು ಅಭಿಮಾನ ಇವನಿಗೆ ಮೀತಾ ಮೇಲೆ. ರಸಿಕ ಅಭಿಮಾನಿಯೊಬ್ಬ ಕಲಾವಿದನನ್ನು ಇಷ್ಟೊಂದು ಪ್ರೀತಿಸುವುದೆಂದರೆ ಅದು ಆ ಕಲಾವಿದನ ಗೌರವವಷ್ಟೇ ಅಲ್ಲ ಆತನ ಕಲೆಗೆ ಕೊಟ್ಟ ಗೌರವ ಕೂಡ ಹೌದು. ಹೀಗೆ ಕಲೆಯನ್ನು ಕಲಾವಿದರನ್ನು ಮನಸಾರೆ ಪ್ರೀತಿಸುವ ಮನುಷ್ಯ ತನ್ನ ಗಂಡನಾದದ್ದು ತನ್ನ ಭಾಗ್ಯವೇ ಸರಿ ಎಂದು ವಿದ್ಯಾಗೆ ಅನಿಸಿದ್ದಿದೆ.

**'ಅವಳಿಗೇನು ಹೆಚ್ಚು ವಯಸ್ಸಾಗಿಲ್ಲ. ಈ ರೀತಿ ತಲೆ ಕೆಡಿಸಿಕೊಂಡರೆ ಹೇಗೆ? ಒಂದು ಪಕ್ಷ ಅವಳಿಗೇನಾದರೂ ಹೆಚ್ಚು ಕಮ್ಮಿಯಾದರೆ ಅಭಿಮಾನಿಗಳಿಗೆ ಅವಳ ಕ್ಯಾಸೆಟ್‌ಗಳಿವೆ, ಸಿಡಿಗಳಿವೆ, ಎಷ್ಟೆಲ್ಲ ಕಡೆಗಳಲ್ಲಾದ ಅವಳ ಕಾರ್ಯಕ್ರಮದ ವಿಡಿಯೊಗಳಿವೆ. ಒಂದರ್ಥದಲ್ಲಿ ಕಲಾವಿದ ಯಾವತ್ತೂ ಸಾಯುವುದಿಲ್ಲ ಶುಭಂಕರ್...'**

ಈ ಘಟನೆಯಿಂದ ಶುಭಂಕರ್ ಎಷ್ಟು ನೊಂದಿರಬಹುದು ಅನ್ನುವುದು ಗೊತ್ತಿತ್ತವಳಿಗೆ. ಅವನ ಕಪ್ಪಿಟ್ಟ ಮುಖವನ್ನು ಅವಳಿಂದ ನೋಡಲಾಗದೆ ಅವನ ಪಕ್ಕದಲ್ಲಿ ಕುಳಿತು ಅವನ ಕೈ ತಟ್ಟುತ್ತ, 'ಮೀತಾ ಮೂರ್ಛಾವಸ್ಥೆಯಲ್ಲಿದ್ದಾಳೆ, ಸರಿ ಹೋದಾಳು. ನಿಮ್ಮಂತಹ ಅನೇಕ ಅಭಿಮಾನಿಗಳು ಅವಳ ಆರೋಗ್ಯ ಸರಿಹೋಗಲೆಂದು ಪ್ರಾರ್ಥಿಸುತ್ತಿದ್ದಾರೆ. ಅವರ ಪ್ರಾರ್ಥನೆಯಿಂದ ಆಕೆ ಆರೋಗ್ಯವಂತಳಾಗಿ ಮತ್ತೆ ಹಾಡುವಂತಾಗುತ್ತಾಳೆ' ಎಂದು ಸಮಾಧಾನ ಮಾಡಲೆತ್ನಿಸಿದರೂ ಶುಭಂಕರ್ ಸುಮ್ಮನೆ ಎದ್ದು ಕೋಣೆಗೆ ಹೋದವನು ಫೋನ್ ರಿಂಗಾಗಲು ವಿದ್ಯಾ ಎತ್ತಿಕೊಳ್ಳುವ ಮುನ್ನ ತಾನೇ ಒಳಗಿನಿಂದ ಎತ್ತಿದ. ಫೋನಿನಲ್ಲಿ ಮಾತಾಡಿ ಐದೇ ನಿಮಿಷದಲ್ಲಿ ತಯಾರಾಗಿ ಹೊರಬಂದ ಶುಭಂಕರನನ್ನು ನೋಡಿ ವಿದ್ಯಾ 'ಈಗೆಲ್ಲಿ ಹೊರಟಿರಿ?' ಎಂದು ಹುಬ್ಬೇರಿಸಿದಳು.

'ವಾಕಡ್‌ಗೆ, ಆಸ್ಪತ್ರೆಗೆ ಹೋಗಿ ಮೀತಾಳನ್ನು ನೋಡಿ ಬರುತ್ತೇನೆ.'

'ಇಷ್ಟು ರಾತ್ರಿ ಹೋಗುವುದಕ್ಕಿಂತ ನಾಳೆ ಹೋಗಬಹುದಲ್ಲ, ಅಲ್ಲದೆ ಆಸ್ಪತ್ರೆಯ ಹತ್ತಿರ ಗದ್ದಲ ಮಾಡಬಾರದೆಂದು ಬೇರೆ ಟೀವಿಯಲ್ಲಿ ಹೇಳಿದ್ದಾರೆ. ನೀವು ಹೋಗಿ ನಿಮ್ಮನ್ನು ಒಳಗೆ ಬಿಡದಿದ್ದರೆ ಅಷ್ಟು ದೂರ ಹೋಗಿದ್ದು ವ್ಯರ್ಥ' ಎಂದ ವಿದ್ಯಾಳ ಯಾವುದೇ ಮಾತು ಕೇಳುವ ಪರಿಸ್ಥಿತಿಯಲ್ಲಿರದ ಶುಭಂಕರ್, 'ಇಲ್ಲ, ಬೇಡ. ಈಗ ಸಾತ್ವಿಕ್ ಜೊತೆ ಹೋಗಿ ಬರುತ್ತೇನೆ. ನಾಳೆ ಬಹುಶಃ ಅವಳನ್ನು ಮುಂಬಯಿಗೆ ಕರೆದುಕೊಂಡು ಹೋಗಬಹುದು. ಸಾತ್ವಿಕ್‌ನ ಪ್ರಯೋಗ ಶಾಲೆಯಲ್ಲಿ ಟಿಶ್ಯೂ ಕಲ್ಚರ್‌ನ ಕೆಲಸ ನಡೆಯುತ್ತಿದೆ. ಅದಕ್ಕೆ ಸಂಬಂಧಿಸಿದಂತೆ ಅವನು ಸ್ಲೋನ್ ಹಾಸ್ಪಿಟಲ್‌ನ ಡಾಕ್ಟರಗಳೊಂದಿಗೆ ಸಂಪರ್ಕದಲ್ಲಿರುತ್ತಾನೆ. ಅವನ ಪರಿಚಯದಿಂದ ನಾವು ಒಳಗೆ ಹೋಗಿ ದೂರದಿಂದ ಆಕೆಯನ್ನು ನೋಡಿಕೊಂಡು ಬರಬಹುದು ಎಂದವನು ಹೇಳಿದ್ದಾನೆ. ಪುಣೆಯಲಿದ್ದೂ ನಾನವಳನ್ನು ನೋಡಲಿಲ್ಲ ಅಂದರೆ ಅರ್ಥವಿದೆಯೆ?' ಅಂದಾಗ ಇನ್ನವನನ್ನು